ಜೇಷ್ಠತೆ ಮತ್ತು ಕಾಲಮಿತಿ ಬಡ್ತಿ

159 (1044) ಶ್ರೀ ಗೋಪಾಲ್ ಪೂಜಾರಿ ಕೆ (ಬೈಂದೂರು) – ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಇಲಾಖೆಯಲ್ಲಿ 10 ವರ್ಷ ಸೇವೆ ಸಲ್ಲಿಸಿದ್ದ 'ಡಿ' ಮತ್ತು 'ಸಿ' ದರ್ಜೆಯ ನೌಕರರನ್ನು ಖಾಯಂಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಈ ನೌಕರರನ್ನು ಸಂಖ್ಯಾತಿರಿಕ್ತ ನೌಕರರೆಂದು ಪರಿಗಣಿಸಿ 'ಸಿ' ಮತ್ತು 'ಡಿ' ದರ್ಜೆ ನೌಕರರಾಗಿ ಕಾರ್ಯ ನಿರ್ವಹಿಸುತ್ತಿದ್ದು, ಸದರಿ ನೌಕರರನ್ನು ಬೇರೆ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ಮರು ನಿಯೋಜನೆಗೊಳಿಸಲು ಸರ್ಕಾರ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಿರುವುದು ನಿಜವೇ,

ಇ) ಈ ನೌಕರನ್ನು ಬೇರೆ ಇಲಾಖೆಗೆ ವಿಲೀನಗೊಳಿಸುವ ಪ್ರಕ್ರಿಯೆ ವಿಳಂಬವಾಗಿರುವುದರಿಂದ 'ಸಿ' ದರ್ಜೆ ನೌಕರರಿಗೆ ಕಾಲಮಿತಿ ಬಡ್ತಿಯನ್ನು ಮತ್ತು ಜೇಷ್ಠತೆಯನ್ನು ನಿಲ್ಲಿಸಿರುವುದರಿಂದ ಈ ನೌಕರರಿಗೆ ಅನ್ಯಾಯವಾಗುವುದಿಲ್ಲವೇ,

ಈ) ಈ ನೌಕರರಿಗೆ ಆಗುವ ಅನ್ಯಾಯವನ್ನು ತಡೆಯಲು ಸರ್ಕಾರ ಯಾವ ರೀತಿ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಸ್ ಶಿವಣ್ಣ (ರೇಷ್ಮೆ ಸಚಿವರು)

ಅ) ಹೌದು ರೇಷ್ಮೆ ಇಲಾಖೆಯಲ್ಲಿ 01–07–1984 ಕ್ಕಿಂತ ಹಿಂದೆ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದವರನ್ನು ಸರ್ಕಾರದ ಆದೇಶ ಸಂಖ್ಯೆ ಡಿಪಿಎಆರ್ 2 ಎಸ್ ಎಲ್ ಸಿ 90 ದಿನಾಂಕ 6–08–1990 ರ ಮೇರೆಗೆ ಸಂಖ್ಯಾತಿರಿಕ್ತ 'ಸಿ' ಮತ್ತು 'ಡಿ' ದರ್ಜೆ ನೌಕರರನ್ನಾಗಿ ಸೇವೆಯಲ್ಲಿ ಸಕ್ರಮಗೊಳಿಸಲಾಗಿದೆ

ಆ) ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಮಿತಿಯು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸಂಖ್ಯಾತಿರಿಕ್ತ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರನ್ನು ಖಾಲಿ ಇರುವ ಸಮಾನ ವೃಂದದ ಹಾಗೂ ಸಮಾನ ವೇತನ ಶ್ರೇಣಿಯನ್ನು ಹೊಂದಿರುವ ಹುದ್ದೆಗಳಿಗೆ ಜೇಷ್ಠತೆಯ ಆಧಾರದ ಮೇಲೆ ಮರುವಿನ್ಯಾಸಗೊಳಿಸಲು

ಸುತ್ತೋಲೆ ಸಂಖ್ಯೆ ಡಿಪಿಎರ್ 6 ಎಸ್ಎಲ್ಸಿ 96, ದಿನಾಂಕ 12–03–1996 ಮತ್ತು ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ 2 ಎಸ್ಎಲ್ಸಿ 97, ದಿನಾಂಕ 11–04–1997 ರಲ್ಲಿ ಅಧಿಕಾರವನ್ನು ನೀಡಲಾಗಿದೆ

ಇ) ಮರುವಿನ್ಯಾಸ ಪ್ರಕ್ರಿಯೆಯು ಜೇಷ್ಠತೆ ಹಾಗೂ ಬೇರೆ ಇಲಾಖೆಗಳಲ್ಲಿ ಕಾಲ ಕಾಲಕ್ಕೆ ಲಭ್ಯವಾಗುವ ಖಾಲಿ ಹುದ್ದೆಗಳ ಮೇಲೆ ಅವಲಂಬಿತವಾಗಿರುತ್ತದೆ ದಿನಗೂಲಿ ಆಧಾರದ ಮೇಲೆ ಸೇವೆಯಲ್ಲಿದ್ದು, ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್2 ಎಸ್ಎಲ್ಸಿ 90, ದಿನಾಂಕ 6–08–90 ರ ಪ್ರಕಾರ ಸಂಖ್ಯಾತಿರಿಕ್ತ ಹುದ್ದೆಗಳಲ್ಲಿ ಸಕ್ರಮಗೊಂಡು ಆ ಹುದ್ದೆಗಳಲ್ಲಿ ಸಲ್ಲಿಸಿದ ಸೇವೆಯನ್ನು ಜೇಷ್ಠತೆಗಾಗಿ ಪರಿಗಣಿಸಲು ಅವಕಾಶವಿರುವುದಿಲ್ಲ

ಈ) ಪ್ರಶ್ನೆ 'ಆ' ಮತ್ತು 'ಇ' ಗೆ ನೀಡಿದ ಉತ್ತರ ಅನ್ವಯವಾಗುತ್ತದೆ

ವಿಸ್ತಾರಗೊಂಡ ಕಾಪುಕ್ಷೇತ್ರದ ಜಾತಿವಾರು ಪಟ್ಟಿ

155(1431) ಶ್ರೀ ಲಾಲಾಜಿ ಆರ್ ಮೆಂಡನ್ (ಕಾಪು) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಸ್ತಾರಗೊಂಡ ಕಾಪು ವಿಧಾನಸಭಾ ಕ್ಷೇತ್ರದ ಜನಸಂಖ್ಯೆಯನ್ನು ಕಂದಾಯ ಗ್ರಾಮವಾರು ಜಾತಿವಾರು ಪಟ್ಟಿಯನ್ನು ನೀಡಲಾಗುವುದೆ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಜಾತಿವಾರು ಪಟ್ಟಿಯನ್ನು ಮಾಡಲಾಗುವುದಿಲ್ಲ ವಯಸ್ಕರ ಮತದಾರರ ಪಟ್ಟಿಯನ್ನು ಮಾಡಲಾಗುವುದು

ಕರ್ನಾಟಕ ವಿಧಾನ ಸಭೆ

1304(1793) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇರುವ ಒಟ್ಟು ಸಣ್ಣ ನೀರಾವರಿ ಕೆರೆಗಳು ಎಷ್ಟು (ತಾಲ್ಲೂಕುವಾರು ವರದಿಗಳನ್ನು ನೀಡುವುದು),